ದಿನಾಂಕ಼ಃ 20-10-2022 ಓ.ಎಸ್. ನಂ. 12/2019

ಪಿ.ಡಬ್ಲ್ಯೂ – 1

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

ನನ್ನ ಸ್ವಂತ ಊರು ಹಳೇ ತೇಗೂರು ಇರುವುದು. ನನಗೆ ಒಬ್ಬ ತಂಗಿ ಹಾಗೂ ಇಬ್ಬರು ಅಕ್ಕಂದಿರು ಇರುವರು. ನನ್ನ ತಂಗಿಯ ಹೆಸರು ಬಾಳವ್ವ ನಿಚ್ಚಣಕಿ ಇರುವುದು . ಅಕ್ಕಂದಿರು ಹೆಸರು ಅಣ್ಣವ್ವ ಹೊಸಮನಿ ಹಾಗೂ ಸುಶೀಲವ್ವ ಹೊಸಮನಿ ಎಂದು ಇರುವುದು. ನಾನು 4 ನೇ ತರಗತಿವರೆಗೆ ಕಲಿತಿದ್ದೇನೆ. ನನ್ನ ಅಕ್ಕಂದಿರು ಹಾಗೂ ತಂಗಿ ಶಾಲೆ ಕಲಿತಿರುವುದಿಲ್ಲ. ನನ್ನ ತಂಗಿಯನ್ನು ಫಕಿರಪ್ಪ ನಿಚ್ಚಣಕಿ ಸಾಃ ಮರಿಗರಿ ಅವರಿಗೆ ವಿವಾಹ ಮಾಡಿ ಕೊಡಲಾಗಿದೆ. ಈಗ ನನ್ನ ತಂಗಿ ಗಂಡ ತೀರಿಕೊಂಡಿರುವನು. ಫಕೀರಪ್ಪ ಅವರ ತಂದೆಯ ಹೆಸರು ಸದೆಪ್ಪ ಎಂದು ಇರುವದು. ಸದರಿ ಸದೆಪ್ಪನಿಗೆ ಇಬ್ಬರು ಮಕ್ಕಳು. ಇಬ್ಬರು ಗಂಡು ಮಕ್ಕಳು ಎಂದು ನನಗೆ ತಿಳಿದಿದೆ. ಫಕೀರಪ್ಪನಿಗೆ ಇಬ್ಬರು ತಂಗಿಯರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂಗಿ ಬಾಳವ್ವ ಹಾಗೂ ಫಕೀರಪ್ಪನಿಗೆ ಮೂರು ಮಂದಿ ಮಕ್ಕಳು ಅವರೆಂದರೆ 4 ಮತ್ತು 5 ನೇ ವಾದಿಗಳು ಹಾಗೂ ರುದ್ರವ್ವ ಎಂಬಾಕೆ ಇರುವಳು. ರುದ್ರವ್ವಳನ್ನು ಯಾರಿಗೆ ವಿವಾಹ ಮಾಡಿಕೊಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಆದರೆ ಅವಳು ಜೀವಂತ ಇರುವಳು. 1 ನೇ ವಾದಿ ಫಕೀರಪ್ಪನ ತಮ್ಮ ಎಂದರೆ ಸರಿ. ಆತನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಆತನ ಪತ್ನಿಯ ಹೆಸರು ಸಾವಕ್ಕ ಇರುವದು. ಆಕೆ 3 ನೇ ವಾದಿ ಇರುವಳು. ಯಮನಪ್ಪನಿಗೆ ಮೂರು ಜನ ಗಂಡುಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುವರು.

ದಾವಾ ಸ್ವತ್ತು ವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಸ್ವತ್ತಿನ ವಿಸ್ತೀರ್ಣ 10 ಎಕರೆ 23 ಗುಂಟೆ ಇರುವದು. 10 ಎಕರೆ 23 ಗುಂಟೆ ಆಸ್ತಿ ಒಂದೇ ಸರ್ವೇ ನಂಬರನಲ್ಲಿದೆ ಎಂದರೆ ಸರಿ. ಸದರಿ 10 ಎಕರೆ 23 ಗುಂಟೆ ಮೂಲತಃ ಸಿದ್ದವ್ವ ಮತ್ತು ಯಮನಪ್ಪ ಅವರಿಗೆ ಸೇರಿದೆ. ಸದರಿ ಸಿದ್ದವ್ವನ ಗಂಡನ ಹೆಸರು ಬಸಪ್ಪ ಇರುವುದು. ಸಿದ್ದವ್ವಳ ಗಂಡ ಬಸಪ್ಪ ಎಂದು ಆರಟಿಸಿಯಲ್ಲಿ ಯಾವ ಕಾಲಕ್ಕೂ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ. 2011 ನೇ ಸಾಲಿನ ಸದರಿ 10 ಎಕರೆ 23 ಗುಂಟೆ ಜಮೀನಿಗೆ ಸಂಬಂಧಿಸಿದ ಆರಓಆರ ನಲ್ಲಿ 6 ಜನರ ಅಂದರೆ ಯಮನಪ್ಪ , ಬಾಳಪ್ಪ, ಸದೆಪ್ಪ, ಫಕೀರಪ್ಪ, ಬಸಪ್ಪ ಹಾಗೂ ಸಿದ್ದವ್ವ ನೀಲಪ್ಪ ನಿಚ್ಚಣಕಿ ಅವರ ಹೆಸರು ದಾಖಲು ಇತ್ತು ಎಂದರೆ ಸರಿ. ಸದರಿ ಸಿದ್ದವ್ವ ನೀಲಪ್ಪ ನಿಚ್ಚಣಕಿ ವಾದಿಯರ ಮನೆತನಕ್ಕೆ ಸಂಬಂಧ ಇರುವಳೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆರಟಿಸಿಯಲ್ಲಿ ಸಿದ್ದವ್ವಳ ಹೆಸರು

ಇರುವುದು ಆದರೆ ಅದು ಹೇಗೆ ದಾಖಲಾಯಿತು ಎಂದು ನನಗೆ ಗೊತ್ತಿರುವುದಿಲ್ಲ. ಆಕೆ ದಾವಾ ಸ್ವತ್ತಿನಲ್ಲಿ ಪಾಲು ಕೇಳಿಕೊಂಡು ವ್ಯಾಜ್ಯ ಮಾಡಿದ್ದಳು ಎಂದರೆ ನನಗೆ ಗೊತ್ತಿಲ್ಲ. ಆಕೆ ಹೆಸರನ್ನು ಉತಾರದಿಂದ ತೆಗೆದು ಹಾಕಬೇಕು ಎಂದು ವಾದಿಯರು ತಹಶೀಲ್ದಾರ ಅವರಿಗೆ ಅರ್ಜಿಯನ್ನು ನೀಡಿದ್ದರು ಮತ್ತು ತದನಂತರ ಎಸಿ ಅವರಿಗೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸು ಎಸಿ ನ್ಯಾಯಾಲಯದಲ್ಲಿ ಆರಟಿಎ ನಂ 201/09-10 ರಂತೆ ಚಾಲ್ತಿಯಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಎಸಿ ನ್ಯಾಯಾಲಯದಲ್ಲಿ ಹಾಗೂ ಸಿವಿಲ ನ್ಯಾಯಾಲಯದಲ್ಲಿ ಏಕ ಕಾಲದಲ್ಲಿ ಕೇಸುಗಳು ಚಾಲ್ತಿಯದ್ದವು ಎಂದರೆ ನನಗೆ ಗೊತ್ತಿಲ್ಲ.

ಈ ಕೇಸಿನಲ್ಲಿ ತಕರಾರು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಸದರಿ ತಕರಾರಿಗೆ ನಾನೇ ಸಹಿ ಮಾಡಿದ್ದೇನೆ. ವಾದಿಯರು ತಮಗೆ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗದ ಕಾರಣ ನನಗೆ ಪವರ ಆಫ ಆಟರ್ನಿಯನ್ನು ನೀಡಿದ್ದರು ಎಂದು ವಾದಿಯರು ತಮ್ಮ ವಾದ ಪತ್ರದಲ್ಲಿ ಹೇಳಿರುವ ವಿಚಾರ ಸರಿ ಇರುತ್ತದೆ.

ಸಿದ್ದವ್ವ ನಿಚ್ಚಣಕಿ ಅವರ ಮನೆ ಮರಿಗೇರಿಯಲ್ಲಿತ್ತು. ಆಕೆಗೆ ಎಷ್ಟು ಜನ ಅಣ್ಣ ತಮ್ಮಂದಿರು ಮತ್ತು ಎಷ್ಟು ಜನ ಮಕ್ಕಳು ಎಂದು ನನಗೆ ಮಾಹಿತಿ ಇರುವುದಿಲ್ಲ. ಆಕೆಗೆ ತುಂಬಾ ಜನ ಮಕ್ಕಳಿದ್ದ ಕಾರಣ ನ್ಯಾಯಾಲಯಕ್ಕೆ ಅಲೆದಾಡಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕೆ ನನಗೆ ಪವರ ಆಫ ಆಟರ್ನಿಯನ್ನು ನೀಡಿದ್ದಳು ಎಂದರೆ ನನಗೆ ಗೊತ್ತಿಲ್ಲ. ನಾನು 2012 ನೇ ಸಾಲಿನಲ್ಲಿ ದಾವಾ ಸ್ವತ್ತನ್ನು ಖರೀದಿಗೆ ಕೊಟ್ಟಿದ್ದೇನೆ. ಪವರ ಆಫ ಆಟರ್ನಿ ತೆಗೆದುಕೊಂಡ ನಂತರ ನಾನು ಅದರ ಆಧಾರದ ಮೇಲೆ ಸಿವಿಲ ನ್ಯಾಯಾಲಯಕ್ಕೆ ಹಾಜರಾಗಿದ್ದೇನೆ. ಸದರಿ ಅಧಿಕಾರ ಪತ್ರವನ್ನು ನಾನು ಸಿದ್ದವ್ವ ಮಾಡಿದ ಕೇಸಿನಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಸದರಿ ಅಧಿಕಾರ ಪತ್ರದ ಆಧಾರದ ಮೇಲೆ ಸಿದ್ದವ್ವ ಎಸಿ ನ್ಯಾಯಾಲಯದಲ್ಲಿ ಮಾಡಿದ ಕೇಸಿನಲ್ಲಿಯೂ ಕೂಡ ಹಾಜರಾಗಿರುವುದಿಲ್ಲ. ನಾನು ಸದರಿ ಅಧಿಕಾರ ಪತ್ರದ ಆಧಾರದ ಮೇಲೆ ಸದರಿ ಸಾಕ್ಷಿ ನುಡಿದಿರುವುದಿಲ್ಲ. ನನಗೆ ಕೇಸಿನಲ್ಲಿ ಹಾಜರಾಗಲು ವಾದಿಯರು ಅಧಿಕಾರ ಪತ್ರ ಕೊಟ್ಟಿದ್ದರೂ ಕೂಡ ನಾನು ಯಾವುದೇ ವಕೀಲರನ್ನು ನೇಮಿಸಿಕೊಳ್ಳದೆ, ನ್ಯಾಯಾಲಯಕ್ಕೆ ಹಾಜರಾಗದೇ ಅಧಿಕಾರ ಪತ್ರವನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ನನಗೆ ನ್ಯಾಯಾಲಯಕ್ಕೆ ಹಾಜರಾಗುವ ಹೊರತಾಗಿ ಬೇರೆ ಯಾವುದೇ ಕೆಲಸಕ್ಕೆ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ವಾದಿಯರು ನನಗೆ ಅಧಿಕಾರ ಪತ್ರ ನೀಡಿದ ಸಮಯದಲ್ಲಿ ಕಿತ್ತೂರಿನಲ್ಲಿ ನ್ಯಾಯಾಲಯ ಚಾಲ್ತಿಯಲ್ಲಿತ್ತು ಎಂದರೆ ಸರಿ. ಕಿತ್ತೂರಿನಲ್ಲಿ ಆಗ ನೊಂದಣಿ ಕಚೇರಿ ಕೂಡ ಅಸ್ತಿತ್ವದಲ್ಲಿತ್ತು ಮತ್ತು ನೋಟರಿ ವಕೀಲರೂ ಕೂಡ ಇದ್ದರು ಎಂದರೆ ಸರಿ. ಆ ಸಮಯದಲ್ಲಿ ನನಗೆ ಕಿತ್ತೂರಿನ ವಕೀಲರುಗಳ ಪರಿಚಯವಿತ್ತು ಎಂದರೆ ಸರಿ. ಅದೇ ರೀತಿ ವಾದಿಯರಿಗೂ ಸಹ ಕಿತ್ತೂರಿನ

ವಕೀಲರುಗಳ ಪರಿಚಯ ಇತ್ತು ಎಂದರೆ ಸರಿ. ವಾದಿಯರಿಗೆ ಹಾಗೂ ನನಗೆ ಸಂಬಂಧಿಸಿದ ಎಲ್ಲಾ ವ್ಯವಾಹಾರಗಳು ಕಿತ್ತೂರು ಮತ್ತು ಬೈಲಹೊಂಗಲದಲ್ಲಿ ನಡೆಯುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಬೆಳಗಾವಿಯಲ್ಲೂ ನಡೆಯುತ್ತದೆ ಎಂದು ನುಡಿದರು. ಅಧಿಕಾರ ಪತ್ರವನ್ನು 1 ಮತ್ತು 2 ನೇ ವಾದಿಯರು ತಯಾರು ಮಾಡಿಸಿರುವರು. ಬೆಳಗಾವಿಯಲ್ಲಿ ಅದನ್ನು ತಯಾರು ಮಾಡಿಸಿದರು. ವಾದಿಯರಿಗೆ ಬೆಳಗಾವಿಯ ಚಿದಂಬರ ನಾಯಕ ವಕೀಲರು ಪರಿಚಯವಿದ್ದ ಕಾರಣ ಅಧಿಕಾರ ಪತ್ರವನ್ನು ಅವರ ಬಳಿ ತಯಾರು ಮಾಡಿಸಿರುವರು. ಕಿತ್ತೂರಿನಲ್ಲಿ ವಕೀಲರು ಇದ್ದರೂ ಕೂಡ ಬೆಳಗಾವಿಯಲ್ಲಿ ವಕೀಲರು ಪರಿಚಯವಿದ್ದ ಕಾರಣ ವಾದಿಯರು ಅಧಿಕಾರ ಪತ್ರವನ್ನು ಬೆಳಗಾವಿಯಲ್ಲಿ ಮಾಡಿಸಿರುವರು. ವಾದಿಯರಿಗೆ ಬೆಳಗಾವಿಯ ವಕೀಲರು ಹೇಗೆ ಪರಿಚಯ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಹಾಗೂ ಅಧಿಕಾರ ಪತ್ರಕ್ಕೆ ಸಹಿ ಹಾಕಿರುವ ಸಾಕ್ಷಿದಾರರು ಕಿತ್ತೂರು, ಬೈಲಹೊಂಗಲ, ಬೆಳಗಾವಿಯಲ್ಲಿ ಓಡಾಡಿಕೊಂಡು ಇರುತ್ತೇವೆ ಎಂದರೆ ಸರಿ. ವಾದಿಯರಿಗೆ ಹೆಚ್ಚು ಓಡಾಡುವ ಮತ್ತು ವ್ಯವಹಾರ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ವ್ಯವಹಾರ ಜ್ಞಾನ ಇದ್ದಿದ್ದರೆ ನನಗೆ ಅಧಿಕಾರ ಪತ್ರವನ್ನು ಕೊಡುವ ಪ್ರಮೇಯ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಧಿಕಾರ ಪತ್ರ ಮಾಡಿಸಲು ವಕೀಲರ ಬಳಿ ಪ್ರಥಮವಾಗಿ 1 ಮತ್ತು 2 ನೇ ವಾದಿಯರು ಮಾತ್ರ ಹೋಗಿದ್ದರು. ನಂತರ ವಾದಿಯರು ವಕೀಲರನ್ನು ಭೇಟಿ ಮಾಡಿದ ನಂತರ ಬಸ ನಿಲ್ದಾಣಕ್ಕೆ ಬಂದು ನನ್ನನ್ನು ಹಾಗೂ ಉಳಿದ ವಾದಿಯರನ್ನು ಕರೆದುಕೊಂಡು ಹೋಗಿರುವರು.

<u>ಮುಂದುವರೆದ ಪಾಟೀ ಸವಾಲುಃ</u> ಸಮಯ ಕೋರಿದ ಕಾರಣ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ನ್ಯಾ.ಬೈಲಹೊಂಗಲ